# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.

## ಓ.ಎಸ್.84/2021

ಸಾಕ್ಷಿಯನ್ನು ದಿಃ 16.11.2023 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

| | | |
|---|---|---|
| ಹೆಸರು | ಪದ್ಮಮ್ಮ | ಪಿ.ಡಬ್ಲ್ಯೂಃ 1 |
| ಗಂಡನ ಹೆಸರು | ಲೇಟ್ ಜಯರಾಮೇಗೌಡ | |
| ವಯಸ್ಸು | 62 ವರ್ಷ | |
| ಕೆಲಸ | ವ್ಯವಸಾಯ | |
| ವಾಸಸ್ಥಳ | ದೊಡ್ಡಹೆಜ್ಜೂರು, ಹುಣಸೂರು | |

ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ-

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಹೇಳಿರುವ ಸಂಗತಿಗಳೆಲ್ಲ ಸತ್ಯವಾಗಿದ್ದು ಸಹಿ ಮಾಡಿದ್ದೇನೆ.

ನಾನು ಈ ದಿನ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

**ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಜಿ.ಆರ್.ಎಸ್ ಅವರಿಂದ**–

1. ನಾನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳ ಬಗ್ಗೆ ತಿಳಿದುಕೊಂಡಿದ್ದೇನೆ. ನನ್ನ ಮಗ ತೀರಿಕೊಂಡ ಬಗ್ಗೆ ದಾವೆಯಲ್ಲಿ ಮಾಹಿತಿ ನೀಡಲು ತಡವಾಗಿರುವ ಬಗ್ಗೆ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಮೂದು ಮಾಡಲಾಗಿದೆ. ನನಗೆ ಮಗ ತೀರಿಕೊಂಡಿದ್ದರಿಂದ ಬೇಜಾರಿತ್ತು. ಆದ್ದರಿಂದ ಮಾಹಿತಿ ನೀಡಲು ತಡವಾಗಿರುತ್ತದೆ.

2. ನನ್ನ ಮಗ ತೀರಿಕೊಂಡ ದಿನಾಂಕ ಮತ್ತು ತಿಂಗಳು ನೆನಪಿಲ್ಲ. ಆದರೆ ಈ ಡಿಸೆಂಬರ್ ಬಂದರೆ 1 ವರ್ಷ ಆಗುತ್ತದೆ. ಪ್ರಸ್ತುತ ದಾವೆ ಸಲ್ಲಿಸಿದ ನಂತರ ನಾನು ಪ್ರತಿ ಮುದ್ದತಿಗೆ ಹಾಜರಾಗಿರುತ್ತೇನೆ ಎಂದರೆ ಸರಿ. ನಾನು ಬಂದಾಗಲೆಲ್ಲಾ ನಮ್ಮ ವಕೀಲರನ್ನು ಭೇಟಿಯಾಗುತ್ತಿದ್ದೆ ಎಂದರೆ ಸರಿ.

3. ದಿಃ 23.05.2023 ರಂದು ನಾನು ನಮ್ಮ ವಕೀಲರ ಕಡೆಯಿಂದ ಒಂದು ಅರ್ಜಿ ಸಲ್ಲಿಸಿದ್ದು, ಅದಕ್ಕೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರ ದಲ್ಲಿ

ಬರೆದಿರುವ ಹಾಗೆ ನನ್ನ ಮಗ ನಾಗರಹೊಳೆ ಫಾರೆಸ್ಟ್ ನಲ್ಲಿ ಅದರ ಹಂಚಿನಲ್ಲಿ ವಾಸವಾಗಿದ್ದು, ಆದ್ದರಿಂದ ನಾವು ಯವೂದೇ ದೂರವಾಣಿ ಕರೆ ಮಾಡಲು ಸಾಧ್ಯವಾಗದೆ ಇದ್ದುದರಿಂದ ನಮ್ಮ ವಕೀಲರಿಗೆ  ಮಾಹಿತಿ ನೀಡಲು ಆಗಿರಲಿಲ್ಲ ಎಂದು ನಮೂದು ಮಾಡಿರುತ್ತೇನೆ.

4. ದಿಃ 23.05.2023 ರಂದು ನಾನು ಅರ್ಜಿ ಸಲ್ಲಿಸಿರುವ ಪ್ರಮಾಣ ಪತ್ರದ ಅಂಶಗಳಿಗೆ ಈ ದಿನ ಸಲ್ಲಿಸಿರುವ ಪ್ರಮಾಣ ಪತ್ರದ ಅಂಶಗಳು ತದ್ವಿರುದ್ಧವಾಗಿರುತ್ತವೆ ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ದಾವೆಯನ್ನು ತಳ್ಳಿಕೊಂಡು ಹೋಗುವ ಉದ್ದೇಶದಿಂದ ಪ್ರಸ್ತುತ ಅರ್ಜಿಗಳನ್ನು ಸಲ್ಲಿಸಿರುತ್ತೇನೆ ಎಂದರೆ ಸುಳ್ಳು. ತಡವಾಗಿ ಅರ್ಜಿ ಸಲ್ಲಿಸಿರುವುದಕ್ಕೆ ದಾಖಲಾತಿಗಳನ್ನು ನೀಡಿರುತ್ತೇನೆ. ಯಾವ ದಾಖಲಾತಿಗಳನ್ನು ನೀಡಿರುತ್ತೇನೆ ಎಂಬ ಪ್ರಶ್ನೆಗೆ ನಮ್ಮ ವಕೀಲರಿಗೆ ಹೇಳಿದ್ದೆ ಅವರೆ ಕೊಟ್ಟಿರಬಹುದು ಎಂದು ಸಾಕ್ಷಿ ನುಡಿಯುತ್ತಾರೆ. ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**3 ರಿಂದ 5 ನೇ ಪ್ರತಿವಾದಿ ಪರ ವಕೀಲರು ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.